worked out.ಯಾವುದೇ ಅಧಿಕಾರಿ ನಿಮಗೆ ತೊಂದರೆ ಕೊಡುವ ದೂರುಗಳು ಬಂದರೆ ತಕ್ಷಣ ನಾವು ಕ್ರಮ ಜರುಗಿಸುತ್ತೇವೆ. ಎಫ್ ಎವಿಸಿ ಒಂದು ತಿಂಗಳೊಳಗೆ ಕೊಡಬೇಕೆನ್ನುವ ಆದೇಶವನ್ನು ಈಗಾಗಲೇ ಕೊಡಲಾಗಿದೆ.

ಅಧ್ಯಕ್ಷರು : ಮಾನ್ಯ ವಿರೂಪಾಕ್ಷಪ್ಪನವರೇ ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಕೆ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದೊಳಗೆ ಉತ್ತರ ನನಗೆ ಸಿಗಬಹುದೋ ?

ಅಧ್ಯಕ್ಷರು : ತರಿಸಿಕೊಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ವಿಶ್ವಯೋಜನೆಯ ಪ್ರಗತಿ

570 - ಶ್ರೀ ಎಂ. ಶಿವಾನಂದ (ಚಿಕ್ಕಬಳ್ಳಾಪುರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 'ವಿಶ್ವ' ಯೋಜನೆಯಡಿ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ? ಮತ್ತು ಖರ್ಚಾಗಿರುವ ಹಣವೆಷ್ಟು ?

ಆ) ಸದರಿ ಫಲಾನುಭವಿಗಳ ಸಂಖ್ಯೆ ಎಷ್ಟು ?

ಇ) ತರಬೇತಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಅನುಸರಿಸುತ್ತಿರುವ ನಿಯಮಗಳೇನು ?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ)

ವರ್ಷ	ಬಿಡುಗಡೆ ಮಾಡಿದ ಹಣ	ಖರ್ಚಾಗಿರುವ ಹಣ
94-95	91,500-00	80,429-00
95-96	1,27,500-00	1,14,081-00
96-97	1,00,300-00	79,070-00

ಆ)

ವರ್ಷ	ತರಬೇತಿ ಪಡೆದವರ ಸಂಖ್ಯೆ
94-95	37
95-96	55
96-97	45

೫) ವಿಶ್ವಯೋಜನೆಯಡಿಯಲ್ಲಿ ತರಬೇತಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಈ ಕೆಳಕಂಡ ನಿಯಮಗಳನ್ನು ಅನುಸರಿಸಲಾಗುತ್ತಿದೆ.

1. ಅನುಮೋದಿತ ಕ್ರಿಯಾ ಯೋಜನೆಯನ್ವಯ ಗ್ರಾಮೀಣ ಹಾಗೂ ಸ್ಥಳೀಯ ಅಭ್ಯರ್ಥಿಗಳ ಮತಿಯಿಂದ ಅರ್ಜಿಯನ್ನು ಪಡೆದು ಸದರಿ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

2. ಸಂದರ್ಶನದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೈಗಾರಿಕಾ ವಿಸ್ತರಣ ಅಧಿಕಾರಿಗಳು ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕರು (ಕಚ್ಚಾಮಾಲು) ಮತ್ತು ಅಧೀಕ್ಷಕರು ಕುಶಲ ಕರ್ಮಿ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ ಇವರ ಸಮ್ಮುಖದಲ್ಲಿ ಸಂದರ್ಶನ ನಡೆಸಲಾಗುವುದು.

3. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ ಇವರ ಅನುಮೋದನೆ ಪಡೆದು ನಂತರ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುವುದು.

4. ಅನುಮೋದನೆ ಪಡೆದ ನಂತರ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ಒಟ್ಟು ಗುರಿಯ ಶೇಕಡ 30ಷ್ಟು ಮಹಿಳೆಯರು, ಶೇ. 15ರಷ್ಟು ಪರಿಶಿಷ್ಟ ಜಾತಿಯ ಫಲಾನುಭವಿಗಳು, ಶೇ.3ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳನ್ನು ಮತ್ತು ಶೇ.12ರಷ್ಟು ಅಲ್ಪಸಂಖ್ಯಾತರನ್ನು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಇನ್ನುಳಿದವರು ಸಾಮಾನ್ಯ ವರ್ಗಕ್ಕೆ ಸೇರಿದವರು.

ಶ್ರೀ ಎಂ. ಶಿವಾನಂದ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ವಿಶ್ವಯೋಜನೆಯಲ್ಲಿ ಕೆಲವಾರು ಅಭ್ಯರ್ಥಿಗಳಿಗೆ ಟ್ರೈನಿಂಗ್ ಕೊಡುತ್ತಾರೆ. ಅದನ್ನು ಒಂದು ವರ್ಷ ಕೊಡುತ್ತಾರೆ, ಇನ್ನೊಂದು ವರ್ಷ ಕೊಡುವುದಿಲ್ಲ. ಅದನ್ನು ಏಕೆ ರೆಗ್ಯೂಲರ್ ಆಗಿ ಮಾಡಬಾರದು ಎಂದು ತಮ್ಮಮೂಲಕ ಮನವಿ ಮಾಡುತ್ತೇನೆ. ಇನ್ನು ಎರಡನೆಯದಾಗಿ ವಿಶ್ವ ಯೋಜನೆಯಡಿಯಲ್ಲಿ ಟ್ರೈನಿಂಗ್ ತೆಗೆದುಕೊಂಡ ಅಭ್ಯರ್ಥಿಗಳಿಗೆ ಯಾವುದೇ ಬ್ಯಾಂಕ್‌ನಲ್ಲಾಗಲಿ, ಹಣಕಾಸು ಸಂಸ್ಥೆಯಲ್ಲಾಗಲಿ ಲೋನ್ ಸಿಗುವುದಿಲ್ಲ. ಆದುದರಿಂದ ಈ ವಿಶ್ವ ಯೋಜನೆಯಡಿಯಲ್ಲಿ ಟ್ರೈನಿಂಗ್ ತೆಗೆದುಕೊಂಡ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ. ಎ. ಮೊಯ್ದೀನ್: ಮಾನ್ಯ ಅಧ್ಯಕ್ಷರೇ, ಈ ವಿಶ್ವ ಯೋಜನೆ ಉದ್ದೇಶವೇ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಕುಶಲಕರ್ಮಿಗಳಿಗೆ ಹೆಚ್ಚಿನ ತರಬೇತಿ ಕೊಡತಕ್ಕಂಥ ಉದ್ದೇಶ. ಹಿಂದೆ ನಾವು ಈ ಲಿಂಕೇಜ್ ಯಾರಿಗೆ ತರಬೇತಿ ಕೊಟ್ಟಿದ್ದೇವೆ. ಅವರಿಗೆ ಸಾಲ ಕೊಡಿಸುವುದು, ಆ ಸಾಲ ಕೊಟ್ಟಮೇಲೆ ಅವರನ್ನು ಉತ್ಪಾದನೆಯಲ್ಲಿ ತೊಡಗಿಸುವುದು, ನಂತರ ಅವರಿಗೆ ಮಾರುಕಟ್ಟೆ ಕಲ್ಪಿಸಿ ಕೊಡುವುದು ಮಾಡುತ್ತಿದ್ದವು. ಆದರೆ ಈಗ ನಮ್ಮ ಟ್ರಸ್ಟ್ ಕೇವಲ ತರಬೇತಿ ಕೊಡುವುದು ಮಾತ್ರ. ಏಕೆಂದರೆ ಇದರಿಂದ ನಮಗೆ ಅನೇಕ ತೊಂದರೆಗಳೂ ಕೂಡ ಬಂದಿತ್ತು. ಈಗಾಗಲೇ ನಾವು ಆದೇಶವನ್ನು ಕೊಟ್ಟಿದ್ದೇವೆ. ಎಲ್ಲಿ, ಯಾವ ರೀತಿಯಾಗಿ ನಮ್ಮ ವರ್ಕ್ ಫೋರ್ಸ್‌ಗೆ ಬೇಡಿಕೆ ಇದೆ, ಸ್ಕಿಲ್ಡ್

ವರ್ಕರ್ಸ್‌ಗೆ ಅಂತಹ ಟ್ರೈನಿಂಗ್‌ಗಳನ್ನು ಮಾತ್ರ ಕೊಡಬೇಕೆನ್ನುವ ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೇವೆ. ಅದೇ ರೀತಿ ಇವತ್ತು ಟ್ರೈನಿಂಗ್ ಕೊಡಲಾಗುತ್ತಿದೆ. ನಿಮ್ಮ ಏರಿಯಾದಲ್ಲಿ ನಾವು ಕೊಟ್ಟಿರತಕ್ಕಂಥ ಟ್ರೈನಿಂಗ್, ಪ್ರಿಂಟಿಂಗ್ ಬುಕ್ ಬೈಂಡಿಂಗ್, ಹ್ಯಾಂಡ್‌ಲೂಂ ವೀವಿಂಗ್, ಲೆದರ್‌ಬ್ಯಾಗ್ಸ್ ಬ್ಲಾಕ್‌ಸ್ಮಿತ್, ರೆಡಿಮೇಡ್ ಗಾರ್ಮೆಂಟ್ಸ್ ಇಂತಹದಕ್ಕೆಲ್ಲಾ ಕೊಟ್ಟಿದ್ದೇವೆ. ಕೆಲವರು ಸಾಲ ಅವರೇ ತೆಗೆದುಕೊಂಡಿದ್ದಾರೆ. ಮತ್ತೆ ಕೆಲವರಿಗೆ ಸಾಲ ಸಿಗದೇ ಇರಬಹುದು. ಅಂತಹವರಿಗೆ ಕೂಡ ನಾವು ಡಿ.ಐ.ಸಿ. ಮೂಲಕ ಮಾರ್ಗದರ್ಶನವನ್ನು ಕೊಡುವುದಕ್ಕೆ ಎಸ್ಕಾರ್ಟ್ ಸರ್ವೀಸ್ ಕೂಡ ಇವತ್ತು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಶಿವಾನಂದ : ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ಖಾಯಂ ಆಗಿ ವಿಶ್ವ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಮಾಡಬೇಕೆಂದು ಎರಡು ಸಲ ಬಂದಾಗ ಪಟ್ಟಿ ಕೊಟ್ಟಿದ್ದರು. ಒಂದೂವರೆ ವರ್ಷವಾಯಿತು, ಇದುವರೆಗೂ ಇದರ ಬಗ್ಗೆ ಏನೂ ಪ್ರಸ್ತಾವನೆ ಇಲ್ಲ. ಆದುದರಿಂದ ತಮ್ಮ ಮೂಲಕ ಏನು ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ. ಎ. ಮೊಯ್ದೀನ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಅಲ್ಲಿ ಆಗಿರತಕ್ಕಂಥ ಕೆಲಸದ ಬಗ್ಗೆ ಮಾಹಿತಿ ಇಲ್ಲವೆಂದು ಕಾಣುತ್ತದೆ. ನಾನು ತಕ್ಷಣ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ನೆನೆಗುದಿಗೆ ಬಿದ್ದಿರತಕ್ಕಂಥ ಒಂದು ಪ್ರಪೋಸಲ್ ಏನಿತ್ತು, ಒಂದು ಸೈಟ್ ಮತ್ತು ಶೆಡ್ ಕೊಡತಕ್ಕಂಥ ವಿಚಾರದಲ್ಲಿ, ನಾವು ಮುಫತ್ತಾಗಿ ಕೆ.ಎಸ್.ಎಸ್.ಐ.ಡಿ.ಸಿ. ಅವರ ಹೆಸರಿನಲ್ಲಿ ಒಂದು ಶೆಡ್‌ನ್ನು ಕೊಟ್ಟಿದ್ದೇವೆ. ಅದನ್ನು ಬೆಂಗಳೂರು ಯೂನಿವರ್ಸಿಟಿಯ ತಾಂತ್ರಿಕ ತಜ್ಞರು ಮತ್ತು ನಮ್ಮ ವೈಸ್ ಚಾನ್ಸಲರ್‌ನ ಅಧ್ಯಕ್ಷತೆಯಲ್ಲಿ ಇವತ್ತು ಅಲ್ಲಿ ಒಂದು ಉತ್ತಮವಾದಂತಹ ಟ್ರೈನಿಂಗ್ ಸೆಂಟರನ್ನು ಅವರ ಹೆಸರಿನಲ್ಲಿ ಮಾಡಬೇಕೆಂದು ಎಲ್ಲಾ ರಂಗಸಜ್ಜಿಕೆ ಆಗಿದೆ. ತಾವೂ ಕೂಡ ಭೇಟಿ ಕೊಡಬೇಕು. ಅಲ್ಲಿ ಏನಾಗುತ್ತಿದೆ ಎನ್ನುವುದನ್ನು ನಮಗೆ ತಾವು ತಿಳಿಸಬೇಕು. ನಾನು ಎರಡು ಸಾರಿ ಬಂದಾಗ ಕೂಡ ತಾವು ಇರಲಿಲ್ಲ. ಅಲ್ಲಿ ಏನೂ ಆಗಿಲ್ಲವೆಂದು ಹೇಳುತ್ತಿದ್ದೀರಿ. ಬಹಳಷ್ಟು ಆಗಿದೆ.

ಅಧ್ಯಕ್ಷರು : ಆಲ್‌ರೈಟ್ ಆಗಿದ್ದರೆ ಸಂತೋಷ ಅವರು ಹೋಗಿ ನೋಡಿಕೊಂಡು ಬರುತ್ತಾರೆ.

ತಡೆಹಿಡಿಯಲಾದ ಪ್ರಶ್ನೆಗಳು

ಮಾಗಡಿ ತಾಲ್ಲೂಕಿನ ನೇಕಾರರಿಗೆ ಪುನರ್‌ವಸತಿ

495 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಮಾಗಡಿ ತಾಲ್ಲೂಕಿನಲ್ಲಿರುವ ನೇಕಾರರ ಒಟ್ಟು ಸಂಖ್ಯೆ ಎಷ್ಟು? ಈ ನೌಕರರಲ್ಲಿ ಹಲವಾರು ಜನ ವಸತಿ ಸೌಕರ್ಯವಿಲ್ಲದೆ, ಸ್ವಂತ ಕಾರ್ಯಾಗಾರವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?